## ಕರ್ನಾಟಕ ರಾಜ್ಯ ಮಹಿಳಾ ಆಯೋಗ, ಬೆಂಗಳೂರು

**ಪೀಠಿಕೆ**

ಮಹಿಳೆಯರ ಹಿತಾಸಕ್ತಿಗಳನ್ನು ರಕ್ಷಿಸುವ ಮತ್ತು ಅವರ ಪ್ರಗತಿ ಮತ್ತು ಅಭಿವೃದ್ಧಿಯನ್ನು ಖಚಿತ ಪಡಿಸುವ ಸಂವೀಧಾನಿಕ ಗುರಿಗೆ ಅನುಗುಣವಾಗಿ, ಕರ್ನಾಟಕ ಸರ್ಕಾರವು ಕರ್ನಾಟಕ ರಾಜ್ಯ ಮಹಿಳಾ ಆಯೋಗ ಅಧಿನಿಯಮ 1995ರ ಅಡಿಯಲ್ಲಿ ದಿನಾಂಕ:26-05-1995 ರಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗವನ್ನು ರಚಿಸಿತು. ಇದು ಶಾಸನಬದ್ಧ ಆಯೋಗವಾಗಿದ್ದು, ಇದು ದಿನಾಂಕ:06-08-1996ರಿಂದ ಕಾರ್ಯ ನಿರ್ವಹಿಸಲು ಪ್ರಾರಂಭಿಸಿತು.

**ಆಯೋಗದ ರಚನೆ:**

ಆಯೋಗವು, ಸರ್ಕಾರ ನಾಮನಿರ್ದೇಶಿಸುವ ಒಬ್ಬರು ಮಹಿಳಾ ಅಧ್ಯಕ್ಷರನ್ನು, ಆರು ಮಂದಿ ಸರ್ಕಾರೇತರ ಸದಸ್ಯರುಗಳನ್ನು ಹಾಗೂ ನಾಲ್ವರು ಪದನಿಮಿತ್ತ ಸದಸ್ಯರುಗಳನ್ನು ಒಳಗೊಂಡಿರುತ್ತದೆ.

ಸರ್ಕಾರಿ ಆದೇಶ ಸಂ:ಮಮಇ/112/ಎಸ್.ಬಿ.ಬಿ./95 ದಿ:17.08.1995ರ ಆದೇಶದನ್ವಯ ಈ ಕೆಳಕಂಡ ಅಧಿಕಾರಿಗಳನ್ನು ಪದನಿಮಿತ್ತ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1 | ಅಧ್ಯಕ್ಷರು | ಶ್ರೀಮತಿ ಮಂಜುಳಾ ಮಾನಸ, ಬಿ.ಎ., ಎಲ್.ಎಲ್.ಬಿ.(ದಿ:23-06-2014 ರಿಂದ 24-10-2016)<br>ಕು. ನಾಗಲಕ್ಷ್ಮೀ ಬಾಯಿ, ಎಂ.ಎ., ಎಲ್.ಎಲ್.ಬಿ. (ದಿ:04-11-2016 ರಿಂದ |
| 2 | ನಾಮ ನಿರ್ದೇಶಿತ ಸದಸ್ಯರು (6 ಜನ ಸದಸ್ಯರು) | 1. ಶ್ರೀಮತಿ ಅನಿತಾ.ಬಿ.ಗುಂಜಾಲ್, ಬಿ.ಎ., ರಾಜೇಂದ್ರ ನಿಲಯ, 3ನೇ ಅಡ್ಡ ರಸ್ತೆ, ಪ್ರಭಾತ್ ಕಾಲೋನಿ, ವಿದ್ಯಾನಗರ, ಹುಬ್ಬಳ್ಳಿ<br>2. ಶ್ರೀಮತಿ ಸೈಯಿದಾ ಉಮ್ಮೆ ಕುಲ್ಸಂ, ಬಿ.ಎಸ್ಸಿ.,ಎಲ್.ಎಲ್.ಬಿ., ಕೋಂ ಶ್ರೀ ಮಹಮ್ಮದ್ ಆಲಿ ಮನೆ ನಂ:28-35, ಕೆ.ಹೆಚ್.ಬಿ.ಕಾಲೋನಿ, ಬಸವಕಲ್ಯಾಣ, ಬೀದರ್ ಜಿಲ್ಲೆ.<br>3. ಶ್ರೀಮತಿ ಬಿ.ಎ.ಗೌರಮ್ಮ, ಎಂ.ಎ. ಮನೆ ನಂ: 2/3, ಬೈಸಾನಿ ಎನ್‌ವಿರಾನ್", ಎನ್.ಪಿ.ಎಸ್. (ಉತ್ತರ ಸಾರ್ವಜನಿಕ ಚೌಕದ) ರಸ್ತೆ, ಬಸವನಗುಡಿ, ಬೆಂಗಳೂರು-560004<br>4. ಶ್ರೀಮತಿ ಧನಲಕ್ಷ್ಮೀ, ವಕೀಲರು, ಬಿನ್ ಲೇ.ಚನ್ನಯ್ಯ, ಸತ್ಯಮಂಗಲ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ<br>5. ಶ್ರೀಮತಿ ಮಾಲತಿ ರಾಮಚಂದ್ರ ನಾಯಕ್, ಶ್ರೀರಾಮನಿಲಯ, ಶ್ರೀರಾಮನಗರ, ಕೊಪ್ಪಳ ರಸ್ತೆ, ಕುಷ್ಠಗಿ ತಾಲ್ಲೂಕು, ಕೊಪ್ಪಳ ಜಿಲ್ಲೆ. |

ಸರ್ಕಾರಿ ಆದೇಶ ಸಂ. ಮಮಇ/112/ಎಸ್.ಬಿ.ಬಿ/95 ದಿನಾಂಕ: 17.08.1996ರ ಆದೇಶದನ್ವಯ ಈ ಕೆಳಕಂಡ ಅಧಿಕಾರಿಗಳನ್ನು ಪದನಿಮಿತ್ತ ಸದಸ್ಯರನ್ನಾಗಿ ನೇಮಕ ಮಾಡಿ ಆದೇಶ ಹೊರಡಿಸಿದೆ.

| ಕ್ರ.ಸಂ. | ಹೆಸರು | ಪದನಾಮ |
|---|---|---|
| 1 | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಪದನಿಮಿತ್ತ ಸದಸ್ಯರು |
| 2 | ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ | ಪದನಿಮಿತ್ತ ಸದಸ್ಯರು |
| 3 | ಡೈರೆಕ್ಟರ್ ಜನರಲ್ ಆಫ್ ಪೋಲೀಸ್ ಅಥವಾ ಅವರಿಂದ ನಾಮಕರಣ ಮಾಡಲ್ಪಟ್ಟ ಡೆಪ್ಯುಟಿ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ ಅದರಲ್ಲೂ ಮಹಿಳೆಯರಿಗೆ ಆದ್ಯತೆ | ಪದನಿಮಿತ್ತ ಸದಸ್ಯರು |
| 4 | ಕಾರ್ಯದರ್ಶಿ, ಕರ್ನಾಟಕ ರಾಜ್ಯ ಮಹಿಳಾ ಆಯೋಗ | ಸದಸ್ಯ ಕಾರ್ಯದರ್ಶಿ |

**ಆಯೋಗದ ಪ್ರಕಾರ್ಯಗಳು**

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧಿನಿಯಮ 1995ರ ಪ್ರಕಾರ ಆಯೋಗವು ಈ ಕೆಳಗಿನ ಎಲ್ಲಾ ಅಥವಾ ಯಾವುದೇ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಎಂದರೆ:–

(ಎ)ಸಂವಿಧಾನ ಮತ್ತು ಇತರ ಕಾನೂನುಗಳಲ್ಲಿ ಮಹಿಳೆಯರಿಗಾಗಿ ಕಲ್ಪಿಸಲಾಗಿರುವ ರಕ್ಷಣೋಪಾಯಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳ ವಿಚಾರಣೆ ನಡೆಸುವುದು ಮತ್ತು ಪರಿಶೀಲಿಸುವುದು;

(ಬಿ)ಅಂಥ ರಕ್ಷಣೋಪಯಗಳ ಕಾರ್ಯ ರೀತಿಯ ಬಗ್ಗೆ ವರದಿಗಳನ್ನು ವಾರ್ಷಿಕವಾಗಿ ಮತ್ತು ಆಯೋಗವು ಸೂಕ್ತವೆಂದು ಪರಿಗಣಿಸಬಹುದಾದಂಥ ಇತರ ಸಮಯಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದು;

(ಸಿ)ಅಂತಹ ವರದಿಗಳಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲು ಸರ್ಕಾರವು ಅಂತಹ ರಕ್ಷಣೋಪಾಯಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಬಗ್ಗೆ ಶಿಫಾರಸ್ಸುಗಳನ್ನು ಮಾಡುವುದು;

(ಡಿ)ಮಹಿಳೆಯರಿಗೆ ಸಂಬಂಧಪಡುವ ಸಂವಿಧಾನದ ಈಗಿರುವ ಉಪಬಂಧಗಳು ಮತ್ತು ಇತರ ಕಾನೂನುಗಳನ್ನು ಕಾಲಕಾಲಕ್ಕೆ ಪುನರ್ ಪರಿಶೀಲಿಸುವುದು ಮತ್ತು ಅಂಥ ಶಾಸನಗಳಲ್ಲಿರುವ ಯಾವುದೇ ದೋಷ, ಕೊರತೆ ಅಥವಾ ನ್ಯೂನತೆಗಳನ್ನು ನಿವಾರಿಸಲು ಶಾಸನಾತ್ಮಕ ಪರಿಹಾರೋಪಾಯಗಳನ್ನು ಸೂಚಿಸುವಂಥ ತಿದ್ದುಪಡಿಗಳನ್ನು ಮಾಡಲು ಶಿಫಾರಸ್ಸುಗಳನ್ನು ಮಾಡುವುದು;

(ಇ)ಮಹಿಳೆಯರಿಗೆ ಸಂಬಂಧಪಡುವ ಸಂವಿಧಾನದ ಮತ್ತು ಇತರ ಕಾನೂನುಗಳ ಉಪಬಂಧಗಳನ್ನು ಉಲ್ಲಂಘಿಸುವ ಪ್ರಕರಣಗಳನ್ನು ಸಮುಚಿತ ಪ್ರಾಧಿಕಾರದ ಮುಂದೆ ತರುವುದು.

**(ಎಫ್) ಈ ಮುಂದಿನವುಗಳಿಗೆ ಸಂಬಂಧಪಟ್ಟ, ಅಂದರೆ:**

(i) ಮಹಿಳಾ ಹಕ್ಕುಗಳನ್ನು ಕಸಿದುಕೊಳ್ಳುವುದಕ್ಕೆ,

(ii)ಮಹಿಳೆಯರಿಗೆ ರಕ್ಷಣೆ ನೀಡಲು ಮತ್ತು ಸಮಾನತೆ ಹಾಗೂ ಅಭಿವೃದ್ಧಿಯ ಉದ್ದೇಶವನ್ನು ಸಹ ಸಾಧಿಸಲು ಅಧಿನಿಯಮಿಸಲಾದ ಕಾನೂನುಗಳನ್ನು ಕಾರ್ಯಗತಗೊಳಿಸದಿರುವುದಕ್ಕೆ,

(iii)ಮಹಿಳೆಯರ ತೊಂದರೆಗಳನ್ನು ನಿವಾರಿಸಲು ಮತ್ತು ಅವರಿಗೆ ಕಲ್ಯಾಣವನ್ನು ಸುನಿಶ್ಚಿತಗೊಳಿಸಲು ಮತ್ತು ಪರಿಹಾರವನ್ನು ಒದಗಿಸಲು ಉದ್ದೇಶಿಸಲಾಗಿರುವ ಕಾರ್ಯನೀತಿಯ ನಿರ್ಧಾರಗಳನ್ನು, ಮಾರ್ಗದರ್ಶಕ ಸೂತ್ರಗಳನ್ನು ಅಥವಾ ಸೂಚನೆಗಳನ್ನು ಪಾಲಿಸದಿರುವುದಕ್ಕೆ,

ಮಹಿಳೆಯರ ಬಗ್ಗೆ ಸಂಬಂಧಪಟ್ಟ ದೂರುಗಳನ್ನು ಪರಿಶೀಲಿಸುವುದು ಮತ್ತು ಆ ವಿಷಯಗಳನ್ನು ತಾನೇ ಗಮನಿಸುವುದು ಮತ್ತು ಅಂತಹ ವಿಷಯಗಳಿಂದ ಉದ್ಭವವಾಗುವ ವಿವಾದಾಂಶಗಳನ್ನು ಯುಕ್ತ ಅಧಿಕಾರಿಗಳಿಗೆ ಒಪ್ಪಿಸುವುದು;

(ಜಿ)ಮಹಿಳೆಯರ ಬಗ್ಗೆ ತೋರುವ ತಾರತಮ್ಯದಿಂದ ಅಥವಾ ಅವರ ಮೇಲೆ ನಡೆಸಲಾಗುವ ದೌರ್ಜನ್ಯಗಳಿಂದ ಉದ್ಭವಿಸುವ ನಿರ್ದಿಷ್ಟ ಸಮಸ್ಯೆಗಳು ಅಥವಾ ಪರಿಸ್ಥಿತಿಗಳ ಬಗ್ಗೆ ವಿಶೇಷ ಅಧ್ಯಯನ ನಡೆಸಲು ಅಥವಾ ವಿಚಾರಣೆ ನಡೆಸಲು ಕರೆ ನೀಡುವುದು ಮತ್ತು ನಿರ್ಬಂಧಗಳನ್ನು ಗುರುತಿಸಿ ಅವುಗಳ ನಿವಾರಣೆಗಾಗಿ ಮಾರ್ಗೋಪಾಯಗಳನ್ನು ಶಿಫಾರಸ್ಸು ಮಾಡುವುದು;

(ಹೆಚ್)ಎಲ್ಲಾ ಕ್ಷೇತ್ರಗಳಲ್ಲೂ ಮಹಿಳಾ ಪ್ರಾತಿನಿಧ್ಯವು ಸೂಕ್ತವಾಗಿ ಆಗಿದೆಯೇ ಎನ್ನುವುದನ್ನು ಸುನಿಶ್ಚಿತಗೊಳಿಸುವ ಮಾರ್ಗಗಳನ್ನು ಸೂಚಿಸಲು ಸಾಧ್ಯವಾಗುವಂತೆ ಉತ್ತೇಜನಾತ್ಮಕ ಹಾಗೂ ಶೈಕ್ಷಣಿಕ ಸಂಶೋಧನೆಗಳನ್ನು ಕೈಗೊಳ್ಳುವುದು ಮತ್ತು ವಸತಿ ಮತ್ತು ಮೂಲಭೂತ ಸೇವೆಗಳಿಂದ ವಂಚಿತರಾಗುವುದು, ಅತಿ ದುಡಿಮೆಯಿಂದಾಗುವ ಶ್ರಮವನ್ನು ಹಾಗೂ ವೃತ್ತಿ ಸಂಬಂಧವಾದ ಆರೋಗ್ಯದ ತೊಂದರೆಗಳನ್ನು ಕಡಿಮೆ ಮಾಡಲು ಅವರ ವೃತ್ತಿಪರ ಉತ್ಪಾದಕತೆಯನ್ನು ಹೆಚ್ಚಿಸಲು ಬೆಂಬಲ ಸೇವೆಗಳ ಹಾಗೂ ತಾಂತ್ರಿಕ ಜ್ಞಾನ ಸಾಕಷ್ಟಿಲ್ಲದಿರುವುದು ಮುಂತಾದ ಅವರ ಅಭಿವೃದ್ಧಿಗೆ ಅಡ್ಡಿಯನ್ನುಂಟು ಮಾಡುವುದಕ್ಕೆ ಕಾರಣವಾದ ಅಂಶಗಳನ್ನು ಗುರುತಿಸುವುದು;

(ಐ)ಮಹಿಳೆಯರನ್ನು ಖೈದಿಗಳಾದ ಅಥವಾ ಇತರ ರೀತಿಯಲ್ಲಿ ಇಡಲಾದ ಬಂದೀಖಾನೆ ರಕ್ಷಣಾ ಗೃಹ ಮಹಿಳಾ ಸಂಸ್ಥೆಗಳು ಅಥವಾ ಅಭಿರಕ್ಷೆಯ ಇತರ ಸ್ಥಳಗಳನ್ನು ಪರೀಕ್ಷಿಸುವುದು ಅಥವಾ ಪರೀಕ್ಷಿಸುವಂತೆ ಮಾಡುವುದು ಮತ್ತು ಅವಶ್ಯವೆಂದು ಕಂಡುಬಂದಲ್ಲಿ ಪರಿಹಾರ ಕ್ರಮವನ್ನು ಸಂಬಂಧಪಟ್ಟ ಪ್ರಾಧಿಕಾರಗಳೊಂದಿಗೆ ಕೈಗೊಳ್ಳುವುದು;

(ಜೆ)ಅತ್ಯಧಿಕ ಸಂಖ್ಯೆಯ ಮಹಿಳೆಯರ ಮೇಲೆ ಪರಿಣಾಮವನ್ನುಂಟು ಮಾಡುವ ವಿವಾದಾಂಶಗಳನ್ನು ಒಳಗೊಂಡಿರುವ ವ್ಯಾಜ್ಯಗಳಿಗೆ ಹಣಕಾಸು ನೆರವನ್ನು ಒದಗಿಸುವುದು;

(ಕೆ)ಮಹಿಳೆಯರ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು ಮತ್ತು ಆ ಬಗ್ಗೆ ಸಲಹೆ ನೀಡುವುದು;

(ಎಲ್)ರಾಜ್ಯದಲ್ಲಿನ ಮಹಿಳೆಯರ ಅಭಿವೃದ್ಧಿಯ ಪ್ರಗತಿಯನ್ನು ಮೌಲ್ಯಮಾಪನ ಮಾಡುವುದು;

(ಎಂ)ಮಹಿಳೆಯರಿಗೆ ಸಂಬಂಧಪಟ್ಟ ಯಾವುದೇ ವಿಷಯ ಮತ್ತು ನಿರ್ದಿಷ್ಟವಾಗಿ ಮಹಿಳೆಯರು ಅನುಭವಿಸುವಂಥ ವಿವಿಧ ತೊಂದರೆಗಳ ಬಗ್ಗೆ ಸರ್ಕಾರಕ್ಕೆ ನಿಯತಕಾಲಿಕವಾಗಿ ವರದಿ ಮಾಡುವುದು;

(ಎನ್) ತನ್ನ ಪ್ರಕಾರ್ಯಗಳ ನಿರ್ವಹಣೆಯಲ್ಲಿ ಸರ್ಕಾರಿ ಇಲಾಖೆಗಳು ಹಾಗೂ ಅದರ ಏಜೆನ್ಸಿಗಳೊಂದಿಗಷ್ಟೆ ಅಲ್ಲದೆ ರಾಜ್ಯದಲ್ಲಿನ ಸ್ವಯಂ ಸೇವಾ ಸಂಸ್ಥೆಗಳು ಅದರಲ್ಲೂ ಮುಖ್ಯವಾಗಿ ಮಹಿಳಾ ಸಂಸ್ಥೆಗಳೊಂದಿಗೆ ಸಹ ತೊಡಗಿಕೊಳ್ಳುವುದು;

(ಓ) ಕೌಟುಂಬಿಕ  ನ್ಯಾಯಾಲಯಗಳ ಮುಂದೆ ಇರುವ ಮಹಿಳೆಯರ ವೈವಾಹಿಕ ವಿವಾದಗಳನ್ನು ಕುರಿತಂತೆ ಸಮಾನವಾಗಿ ಹಾಗೂ ನಿಷ್ಪಕ್ಷಪಾತವಾಗಿ ನ್ಯಾಯವನ್ನು ಸುನಿಶ್ಚಿತಗೊಳಿಸಲು ಮಹಿಳೆಯರಿಗೆ ನೆರವು ನೀಡುವುದು;

(ಪಿ) ಸರ್ಕಾರವು ಅದಕ್ಕೆ ಉಲ್ಲೇಖಿಸಬಹುದಾದಂಥ ಇತರ ವಿಷಯಗಳು.

**ಆಯೋಗದ ಅಧಿಕಾರಗಳು**

ಆಯೋಗವು ಈ ಅಧಿನಿಯಮದ ಉದ್ದೇಶಗಳಿಗೆ ಯಾವುದೇ ವಿಷಯವನ್ನು ತನಿಖೆ ಮಾಡುವಾಗ ಮತ್ತು ನಿರ್ದಿಷ್ಟವಾಗಿ ಈ ಮುಂದಿನ ವಿಷಯಗಳ ಸಂಬಂಧದಲ್ಲಿ ದಾವೆಯ ವಿಚಾರಣೆ ನಡೆಸುವ ಸಿವಿಲ್ ನ್ಯಾಯಾಲಯವು 1908ರ ಸಿವಿಲ್ ಪ್ರಕ್ರಿಯಾ ಸಂಹಿತೆಯಡಿ (1908ರ ಕೇಂದ್ರ ಅಧಿನಿಯಮ 5) ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದರೆ;

(ಎ) ಕರ್ನಾಟಕದ ಯಾವುದೇ ಭಾಗದಿಂದ ಯಾವೊಬ್ಬ ವ್ಯಕ್ತಿಯನ್ನು ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಅಗತ್ಯಪಡಿಸುವುದು ಮತ್ತು ಪ್ರಮಾಣ ಮಾಡಿಸುವ ಮೂಲಕ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಾಸ್ತಾವೇಜನ್ನು ಕಂಡು ಹಿಡಿಯುವಂತೆ ಮತ್ತು ಹಾಜರುಪಡಿಸುವಂತೆ ಅವಶ್ಯಪಡಿಸುವುದು;

(ಸಿ) ಅಫಿಡವಿಟ್‌ನ ಮೂಲಕ ಸಾಕ್ಷ್ಯವನ್ನು ಸ್ವೀಕರಿಸುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಸರ್ಕಾರಿ ಕಛೇರಿಯಿಂದ ಯಾವುದೇ ಸರ್ಕಾರಿ ದಾಖಲೆಯನ್ನು ಅಥವಾ ಅದರ ಪ್ರತಿಯನ್ನು ಒದಗಿಸುವಂತೆ ಅಗತ್ಯಪಡಿಸುವುದು;

(ಇ) ಸಾಕ್ಷಿಗಳು ಮತ್ತು ದಾಸ್ತಾವೇಜುಗಳ ವಿಚಾರಣೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು ಮತ್ತು;

(ಎಫ್) ನಿಯಮಿಸಬಹುದಾದಂಥ ಇತರ ಯಾವುದೇ ವಿಷಯ.

**ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯ ಚಟುವಟಿಕೆಗಳು:**

ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ಈ ಕೆಳಕಂಡ ಸೌಲಭ್ಯಗಳನ್ನು ಮಹಿಳೆಯರಿಗೆ ದೊರಕಿಸಲಾಗುತ್ತಿದೆ.

1. ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ
2. ಕಾನೂನು ಅರಿವು ಕಾರ್ಯಕ್ರಮಗಳು
3. ಸುರಕ್ಷಾ ಯೋಜನೆಯಡಿ ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪರಿಹಾರ ಹಾಗೂ ಪುನರ್ ವಸತಿ ಕಲ್ಪಿಸಲಾಗುವುದು.
4. ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ 2013

1. **ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ:**

ಕರ್ನಾಟಕ ರಾಜ್ಯದಲ್ಲಿ ಕೌಟುಂಬಿಕ ನ್ಯಾಯಾಲಯಗಳ ಕಾರ್ಯನಿರ್ವಹಣೆ ಪರಿಣಾಮಕಾರಿಯಾಗಿ ಆಗುವಂತೆ ಮಾಡಲು ಕರ್ನಾಟಕ ರಾಜ್ಯ ಮಹಿಳಾ ಆಯೋಗ ರಾಜ್ಯದ ಮೂರು ಜಿಲ್ಲೆಗಳಲ್ಲಿ–ಮೈಸೂರು, ರಾಯಚೂರು, ಕಲಬುರ್ಗಿ ಜಿಲ್ಲೆಗಳಲ್ಲಿ ಮಹಿಳಾ ಸಹಾಯ ವೇದಿಕೆ ಕಾರ್ಯನಿರ್ವಹಿಸುತ್ತಿದೆ. ಕೌಟುಂಬಿಕ ನ್ಯಾಯಾಲಯಕ್ಕೆ ಬರುವ ಮಹಿಳೆಯರಿಗೆ ಸಹಾಯ ಮಾಡಲು ಕೌಟುಂಬಿಕ ನ್ಯಾಯಾಲಯಗಳಲ್ಲಿ ಮಹಿಳಾ ಸಹಾಯ ವೇದಿಕೆ ಸಹಾಯ ಮಾಡುತ್ತದೆ.

2. **ಕಾನೂನು ಅರಿವು ಕಾರ್ಯಕ್ರಮಗಳು:**

- ಮಹಿಳಾ ಕಾನೂನುಗಳ ಬಗ್ಗೆ ಅರಿವು ಮೂಡಿಸುವ ಶಿಬಿರಗಳನ್ನು ರಾಜ್ಯದ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಮೈಸೂರು ವಿಶ್ವವಿದ್ಯಾಲಯ ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾಂ ಮತ್ತು ಸರ್ಕಾರಿ ಸಂಸ್ಥೆಗಳ ಸಹಯೋಗದೊಂದಿಗೆ ಕಾನೂನು ಅರಿವು ಕಾರ್ಯಕ್ರಮವನ್ನು ವಿಭಾಗೀಯ ಮಟ್ಟದಲ್ಲಿ ನಡೆಸಲಾಗಿದೆ. ಈ ಕಾರ್ಯಕ್ರಮದಲ್ಲಿ ಮಹಿಳೆಯರಿಗೆ ಅರಿವು ಮೂಡಿಸಲು 1.ಮಹಿಳೆಯರ ಸಂವಿಧಾನದ ಹಕ್ಕುಗಳು, 2.ಮಹಿಳೆಯರ ಮೇಲಿನ ಎಲ್ಲಾ ತರಹದ ದೌರ್ಜನ್ಯಗಳು, 3.ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ, 4.ಹೆಣ್ಣು ಭ್ರೂಣ ಹತ್ಯೆ, 5.ವಿವಾಹ ಮತ್ತು ವಿಚ್ಛೇಧನೆ, 2ನೇ ಮದುವೆ, 6.ಜೀವನಾಂಶ, 7.ಆಸ್ತಿ ಹಕ್ಕುಗಳು, 8.ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರ ರಕ್ಷಣೆ ಕಾಯ್ದೆ 2005 ಈ ವಿಷಯಗಳ ಬಗ್ಗೆ ಜಾಗೃತಿ ಶಿಬಿರದಲ್ಲಿ ಮಹಿಳಾ ಕಾನೂನುಗಳ ಬಗ್ಗೆ ಮಾಹಿತಿ ನೀಡಲಾಗುತ್ತದೆ. ವಿಭಾಗೀಯ ಮಟ್ಟದಲ್ಲಿ ವಿಶ್ವವಿದ್ಯಾಲಯಗಳೊಂದಿಗೆ ಹಾಗೂ ಸ್ಥಳೀಯ ಸಂಸ್ಥೆಗಳು ಇಲಾಖೆಗಳ ಸಹಯೋಗದೊಂದಿಗೆ ಕಾನೂನು ಅರಿವು ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ. ಇದರ ಉಪಯೋಗವನ್ನು ಎಲ್ಲಾ ವರ್ಗದ ಮಹಿಳೆಯರು ಪಡೆದುಕೊಳ್ಳುತ್ತಿದ್ದಾರೆ.

**'ಮಹಿಳಾ ಆಯೋಗದ ಚಿತ್ತ, ಜಿಲ್ಲಾಡಳಿತದತ್ತ'** ಜಿಲ್ಲೆಯಲ್ಲಿನ ಮಹಿಳೆಯರ ಸಮಸ್ಯೆಗಳು ಮತ್ತು ಅಹವಾಲುಗಳನ್ನು ಸ್ವೀಕರಿಸಲು ಮತ್ತು ಮಹಿಳೆಯರ ಕುಂದು ಕೊರತೆಯನ್ನು ಜಿಲ್ಲಾಡಳಿತದೊಂದಿಗೆ ಬಗೆಹರಿಸಲು ಸಂಬಂಧಪಟ್ಟ ಜಿಲ್ಲೆಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿಗಳು ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಜಿಲ್ಲೆಗಳಿಗೆ ಭೇಟಿ ನೀಡಿ, ದೂರರ್ಜಿದಾರರ ಸಮಸ್ಯೆಗಳನ್ನು ಬಗೆಹರಿಸಲಾಗುತ್ತಿದೆ. ಈ ಸಂಬಂಧ ಈಗಾಗಲೇ ಶಿವಮೊಗ್ಗ, ಕೋಲಾರ, ಹಾಸನ, ಮೈಸೂರು ಈ ಜಿಲ್ಲೆಗಳಲ್ಲಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿ, ಮಹಿಳೆಯರಲ್ಲಿ ಅರಿವು ಮೂಡಿಸಲಾಗಿದೆ.

3. **ಸುರಕ್ಷಾ ಯೋಜನೆ :**

- ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು/ಹೆಣ್ಣು ಮಕ್ಕಳಿಗೆ ಪರಿಹಾರ ಕಲ್ಪಿಸುವ ಸುರಕ್ಷಾ ಯೋಜನೆಯನ್ನು 2007ರಲ್ಲಿ ರಾಜ್ಯ ಸರ್ಕಾರ ಜಾರಿಗೆ ತಂದಿದೆ.
- ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು/ಹೆಣ್ಣು ಮಕ್ಕಳಿಗೆ ರೂ.2.00 ಲಕ್ಷಗಳ ಪರಿಹಾರ ಧನವನ್ನು ನೀಡಲಾಗುತ್ತಿದ್ದು, ಇದನ್ನು ದಿನಾಂಕ:20–03–2015ರಿಂದ ರೂ.3.00 ಲಕ್ಷಗಳಿಗೆ ಹೆಚ್ಚಿಸಿ ಸರ್ಕಾರ ಆದೇಶಿಸಿರುತ್ತದೆ.
- ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಈವರೆಗೆ ಒಟ್ಟು 75ಜನ ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ಪರಿಹಾರ ಧನವನ್ನು ವಿತರಿಸಲಾಗಿದೆ.
- ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು/ಹೆಣ್ಣು ಮಕ್ಕಳಿಗೆ ರೂ.3000/–ಗಳ ಪಿಂಚಣಿ ಸೌಲಭ್ಯವನ್ನು ದಿ:19–09–2015 ರಿಂದ ಕಂದಾಯ ಇಲಾಖೆ ಮೂಲಕ ಜಾರಿಗೊಳಿಸಲಾಗಿದೆ. ಈ ಸೌಲಭ್ಯವನ್ನು ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು ಪಡೆದುಕೊಳ್ಳುತ್ತಿದ್ದಾರೆ.
- ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು/ಹೆಣ್ಣು ಮಕ್ಕಳಿಗೆ ಅಲ್ಪಾವಧಿ ಹಾಗೂ ದೀರ್ಘಾವಧಿ ಚಿಕಿತ್ಸೆ–ಪ್ಲಾಸ್ಟಿಕ್ ಸರ್ಜರಿ ಹಾಗೂ ಕರೆಕ್ಟಿವ್ ಪ್ಲಾಸ್ಟಿಕ್ ಸರ್ಜರಿ ವೆಚ್ಚಗಳಿಗಾಗಿ ಪ್ರತಿ ಫಲಾನುಭವಿಗೆ ಗರಿಷ್ಠ ರೂ.20.00 ಲಕ್ಷಗಳ ಮಿತಿಯವರೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ಲಭ್ಯವಿಲ್ಲದ ಚಿಕಿತ್ಸೆಯನ್ನು ಖಾಸಗಿ ಆಸ್ಪತ್ರೆಗಳಲ್ಲಿ ಪಡೆಯಬಹುದಾಗಿದೆ.
- ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು/ಹೆಣ್ಣು ಮಕ್ಕಳಿಗೆ ಸರ್ಕಾರದ ವಿವಿಧ ಯೋಜನೆಗಳಡಿ ಲಭ್ಯವಿರುವ ವಸತಿ/ನಿವೇಶನ ಹಂಚಿಕೆಯಲ್ಲಿ ಅವಕಾಶ ನೀಡಲು ಸಂಬಂಧಪಟ್ಟ ಜಿಲ್ಲಾ ಅಧಿಕಾರಿಗಳಿಗೆ ಆಯೋಗದಿಂದ ಪತ್ರ ಮುಖೇನ ಶಿಫಾರಸ್ಸು ಮಾಡಲಾಗಿದೆ. ಇದರ ಪ್ರಯೋಜನವನ್ನು ಆ್ಯಸಿಡ್ ದಾಳಿಗೆ ಒಳಗಾದ ಮಹಿಳೆಯರು ಪಡೆದುಕೊಳ್ಳುತ್ತಿದ್ದಾರೆ.

- ರಾಜ್ಯದಲ್ಲಿ ಆ್ಯಸಿಡ್ ದಾಳಿಯಲ್ಲಿ ಮಹಿಳೆಯರು/ಹೆಣ್ಣು ಮಕ್ಕಳು ಮೃತಪಟ್ಟಲ್ಲಿ, ಕರ್ನಾಟಕ ಸರ್ಕಾರದ ಸ್ಥೈರ್ಯ ಯೋಜನೆಯಡಿ ಕುಟುಂಬದ ಸದಸ್ಯರಿಗೆ ರೂ.1.00 ಲಕ್ಷಗಳ ಮರಣ ಪರಿಹಾರ ನೀಡಲು ಅವಕಾಶ ಕಲ್ಪಿಸಲಾಗಿದೆ.
- ಆ್ಯಸಿಡ್ ದಾಳಿಯಲ್ಲಿ ಶೇ.40 ಅಥವಾ ಅದಕ್ಕಿಂತ ಹೆಚ್ಚಿನ ಪ್ರಮಾಣದ ಅಂಗವಿಕಲತೆಗೆ ಒಳಗಾಗಿದ್ದಲ್ಲಿ, ಅಂಗವಿಕಲರಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆ ಅಡಿಯಲ್ಲಿ ಈ ಕೆಳಕಂಡ ಸೌಲಭ್ಯಗಳಿಗೆ ಅರ್ಹರಾಗಿರುತ್ತಾರೆ.

➢ ಗುಂಪು–'ಬಿ' ಹುದ್ದೆಗಳಲ್ಲಿ ಶೇ.3, ಗುಂಪು – 'ಸಿ' ಮತ್ತು 'ಡಿ' ಹುದ್ದೆಗಳಲ್ಲಿ ಶೇ.5 ಮೀಸಲಾತಿ ಕಲ್ಪಿಸಲಾಗಿದೆ.

  - ವೃತ್ತಿ ತರಬೇತಿ ಮತ್ತು ಸ್ವಾ–ಉದ್ಯೋಗ ನೆರವು.
  - ಉಚಿತ ಕಾನೂನು ನೆರವು ಕಾನೂನು ಸೇವಾ ಪ್ರಾಧಿಕಾರದ ಮೂಲಕ ನೀಡಲಾಗುತ್ತದೆ.

**4. ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ) ಅಧಿನಿಯಮ 2013.**

- ಸೆಕ್ಷನ್ 5, 20, 21 (1) (2)ರ ಉದ್ದೇಶಗಳಿಗಾಗಿ ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಯನ್ನು ನೇಮಿಸಿ ಅಧಿಸೂಚಿಸಲು ಕಡ್ಡಾಯಗೊಳಿಸಲಾಗಿದೆ. ಜಿಲ್ಲಾಧಿಕಾರಿಯು ಸ್ಥಳೀಯ ಸಮಿತಿಯಿಂದ ಸಲ್ಲಿಕೆಯಾಗುವ ವರದಿಗಳು ಸಕಾಲದಲ್ಲಿ ಸಲ್ಲಿಕೆಯಾಗುವಂತೆ ಮೇಲ್ವಿಚಾರಣೆಯನ್ನು ಮಾಡತಕ್ಕದ್ದು. ಲೈಂಗಿಕ ಕಿರುಕುಳದ ಮತ್ತು ಮಹಿಳೆಯರ ಹಕ್ಕುಗಳ ಬಗ್ಗೆ ಅರಿವನ್ನು ಉಂಟುಮಾಡುವುದಕ್ಕಾಗಿ ಸರ್ಕಾರೇತರ ಸಂಸ್ಥೆಗಳು ತೊಡಗಿಸಿಕೊಳ್ಳುವಂತೆ ಮಾಡತಕ್ಕದ್ದು.
- ಸರ್ಕಾರದ ಆದೇಶ ಸಂಖ್ಯೆ:ಮಮಇ/28/ರಾಮಆ/2015 ಬೆಂಗಳೂರು ದಿ:18–11–2015 ರ ಆದೇಶದಲ್ಲಿ ಪ್ರತಿಯೊಂದು ಜಿಲ್ಲೆಗೆ ಮೇಲಿನ ಅಧಿನಿಯಮದ ಮೇರೆಗೆ ಅಧಿಕಾರಗಳನ್ನು ಚಲಾಯಿಸಲು ಅಥವಾ ಪ್ರಕಾರ್ಯವನ್ನು ನಿರ್ವಹಿಸಲು ಪ್ರತಿಯೊಂದು ಜಿಲ್ಲೆಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯನ್ನು ನೇಮಿಸಲಾಗಿದೆ. ಮತ್ತು ರಾಜ್ಯಮಟ್ಟದ ಸಕ್ಷಮ ಪ್ರಾಧಿಕಾರ ಸಮಿತಿಯನ್ನು ಸರ್ಕಾರ ರಚಿಸಿದ್ದು, ಸದರಿ ಸಮಿತಿಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಕಾರ್ಯದರ್ಶಿಗಳು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ. ಆಯೋಗವು ರಾಜ್ಯದಲ್ಲಿ ದೂರು ನಿವಾರಣಾ ಸಮಿತಿ ರಚನೆ ಮತ್ತು ಅದರ ಕಾರ್ಯವೈಖರಿ ಬಗ್ಗೆ ವರದಿಯನ್ನು ಪಡೆದು ಪರಿಶೀಲಿಸಲಾಗುತ್ತದೆ.

**"ದಿಶಾ" ಯೋಜನೆ:**

- ಕರ್ನಾಟಕ ರಾಜ್ಯ ಸರ್ಕಾರವು 2016–17ನೇ ಸಾಲಿನಲ್ಲಿ 'ದಿಶಾ' ಯೋಜನೆಯನ್ನು ಘೋಷಿಸಲಾಗಿದೆ.
- ಜಿಲ್ಲಾ ಮಟ್ಟದಲ್ಲಿ ಮಹಿಳಾ ಕಲ್ಯಾಣ ಸಮಿತಿಯನ್ನು ರಚಿಸಿ, ಮಹಿಳೆಯರಿಗೆ ಮಾನಸಿಕವಾಗಿ, ಕೌಟುಂಬಿಕವಾಗಿ ಆಗುವ ಸಮಸ್ಯೆಗಳು ಮತ್ತು ಮಹಿಳೆಯರ ಮೇಲೆ ವಿವಿಧ ರೀತಿಯ ದೌರ್ಜನ್ಯಗಳನ್ನು ಆಲಿಸಿ, ನ್ಯಾಯ ಸಂಧಾನ, ಸಮಾಲೋಚನೆ, ಅಗತ್ಯ ಸಲಹೆ ಹಾಗೂ ಮಹಿಳೆಯರ ಮೇಲೆ ಯಾವುದೇ ದೌರ್ಜನ್ಯ, ಅಹಿತಕರ ಘಟನೆ ನಡೆದಲ್ಲಿ ಈ ಕಲ್ಯಾಣ ಸಮಿತಿ ಘಟನೆ ನಡೆದ ಸ್ಥಳಗಳಿಗೆ ಭೇಟಿ ನೀಡಿ, ಪರಿಶೀಲನೆ ಮಾಡಿ ವರದಿಯನ್ನು ಆಯೋಗಕ್ಕೆ ನೀಡುತ್ತದೆ.
- ಕರ್ನಾಟಕ ರಾಜ್ಯದ 30 ಜಿಲ್ಲೆಗಳಲ್ಲಿ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಯನ್ನು ರಚಿಸಲು ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ 30 ಜಿಲ್ಲೆಗಳಿಂದ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಗೆ ಸದಸ್ಯರ ಪಟ್ಟಿಯನ್ನು ಆಯೋಗಕ್ಕೆ ಕಳುಹಿಸಲಾಗಿದ್ದು, ಇದನ್ನು ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಇವರ ಮುಖಾಂತರ ಅಭ್ಯರ್ಥಿಗಳ ಹಿನ್ನೆಲೆಗಳನ್ನು ಪರಿಶೀಲಿಸಲು ಸಂಬಂಧಪಟ್ಟ ಪೋಲೀಸ್ ಇಲಾಖೆಯಿಂದ ಮಾಹಿತಿ ಪಡೆಯಲು (ಕ್ರಿಮಿನಲ್ ಹಿನ್ನೆಲೆ) ಸದಸ್ಯರ ಪಟ್ಟಿಯನ್ನು ಅಂತಿಮಗೊಳಿಸಲು ಕೋರಲಾಗಿತ್ತು.
- ಒಟ್ಟು 30 ಜಿಲ್ಲೆಗಳ "ದಿಶಾ" ಯೋಜನೆಯ (ಮಹಿಳಾ ಕಲ್ಯಾಣ ಸಮಿತಿ)ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ.

**ತರಬೇತಿ:**

'ದಿಶಾ' ಯೋಜನೆಯ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಯ ಸದಸ್ಯರಿಗೆ ತರಬೇತಿ ನೀಡಲು ನ್ಯಾಷನಲ್ ಲಾ ಸ್ಕೂಲ್ ಆಫ್ ಇಂಡಿಯಾ ಇವರೊಂದಿಗೆ ಮಾತುಕತೆ ನಡೆಸಿ ತರಬೇತಿಗೆ ತಗಲುವ ಅಂದಾಜು ಖರ್ಚು– ವೆಚ್ಚಗಳ ಬಗ್ಗೆ ಚರ್ಚೆ ನಡೆಸಲಾಗಿದೆ. ಇನ್ನು ಕೆಲವೇ ದಿನಗಳಲ್ಲಿ ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿ ಸದಸ್ಯರುಗಳಿಗೆ ತರಬೇತಿ ನೀಡುವ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.

- ಈ ಸಮಿತಿಗೆ ಸದಸ್ಯರುಗಳು: ಡಾಕ್ಟರ್ (ಸ್ತ್ರೀ ತಜ್ಞರು, ಮನಶಾಸ್ತ್ರಜ್ಞರು), ವಕೀಲರು, ಶಿಕ್ಷಣ ತಜ್ಞರು, ಪೋಲಿಸ್ ಅಧಿಕಾರಿ, ಸಮಾಜ ಸೇವಕರು, ಮಹಿಳಾ ಅಭಿವೃದ್ಧಿ ಅಧಿಕಾರಿಗಳು, ಮುಂತಾದ ಜನರು ಈ ಸಮಿತಿಯಲ್ಲಿ ಇರುತ್ತಾರೆ.
- ಜಿಲ್ಲಾ ಮಹಿಳಾ ಕಲ್ಯಾಣ ಸಮಿತಿಗೆ ಅಗತ್ಯ ಅನುದಾನವನ್ನು ಸರ್ಕಾರದ ಮಾರ್ಗದರ್ಶನದನ್ವಯ ಕರ್ನಾಟಕ ರಾಜ್ಯ ಮಹಿಳಾ ಆಯೋಗದಿಂದ ಬಿಡುಗಡೆ ಮಾಡಲಾಗುತ್ತದೆ.
- ಈ ಯೋಜನೆಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕರ ಸಹಯೋಗದೊಂದಿಗೆ ಕಾರ್ಯಾರಂಭಗೊಳಿಸಲಾಗುತ್ತಿದೆ.
- ಮಹಿಳಾ ಕಲ್ಯಾಣ ಸಮಿತಿಯು ಜಿಲ್ಲೆಯಿಂದ ಬಂದ ದೂರರ್ಜಿಗಳನ್ನು ಸ್ವೀಕರಿಸುವುದು, ಸಮಾಲೋಚನೆ ಹಾಗೂ ಸೂಕ್ತ ಕ್ರಮ ಕೈಗೊಳ್ಳುತ್ತದೆ.
- ಜಿಲ್ಲೆಯಿಂದ ದಾಖಲಾಗುವ ಮಹಿಳಾ ದೌರ್ಜನ್ಯ/ಲೈಂಗಿಕ ಕಿರುಕುಳದ ಪ್ರಕರಣಗಳ ಬಗ್ಗೆ ಪರಾಮರ್ಶೆ ನಡೆಸುವುದು, ಜಿಲ್ಲಾ ಕಾರಾಗೃಹದಲ್ಲಿ ಮಹಿಳೆಯರನ್ನು ಖೈದಿಗಳಾಗಿ ಅಥವಾ ಇತರ ರೀತಿಯಲ್ಲಿ ಇಡಲಾದ ಬಂಧಿಖಾನೆ, ರಕ್ಷಣಾ ಗೃಹ, ಮಹಿಳಾ ಸಂಸ್ಥೆಗಳು, ಅಭಿರಕ್ಷೆಯ ಇತರ ಸ್ಥಳಗಳನ್ನು ಪರಿಶೀಲಿಸುವುದು.
- ಅಧಿಕ ಸಂಖ್ಯೆಯ ಮಹಿಳೆಯರ ಮೇಲೆ ಪರಿಣಾಮ ಉಂಟು ಮಾಡುವ ವಿವಾದಾಂಶಗಳನ್ನು ಒಳಗೊಂಡಿರುವ ವ್ಯಾಜ್ಯಗಳಿಗೆ ನೆರವು ನೀಡುವ ಬಗ್ಗೆ ವರದಿ ನೀಡುವುದು.
- ಜಿಲ್ಲೆಯ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಯೋಜನಾ ಪ್ರಕ್ರಿಯೆಗಳಲ್ಲಿ ಭಾಗವಹಿಸಿ, ಈ ಬಗ್ಗೆ ಸಲಹೆಗಳನ್ನು ನೀಡುವುದು.
- ಜಿಲ್ಲೆಯ ಮಹಿಳೆಯರ ಅಭಿವೃದ್ಧಿಯನ್ನು ಮೌಲ್ಯಮಾಪನ ಮಾಡಿ ವರದಿಯನ್ನು ಮಹಿಳಾ ಆಯೋಗಕ್ಕೆ ಕಳುಹಿಸುವುದು.

- ಕರ್ನಾಟಕ ರಾಜ್ಯದ ಕೆಲವು ಭಾಗಗಳಲ್ಲಿ ಋತುಮತಿಯಾದ ಹೆಣ್ಣು ಮಕ್ಕಳು ಹಾಗೂ ಜನ್ಮ ನೀಡಿದ ತಾಯಿಂದರನ್ನು ಊರಿನಿಂದ ಹೊರ ಇಡುವ ಗೊಲ್ಲರ ಹಟ್ಟಿಯ ಸಮಸ್ಯೆ ಕುರಿತು ಇತ್ಯರ್ಥಕ್ಕಾಗಿ ಕರ್ನಾಟಕ ರಾಜ್ಯಾದ್ಯಂತ "ಮಹಿಳಾ ಆಯೋಗದ ನಡಿಗೆ ಗೊಲ್ಲರ ಹಟ್ಟಿಯ ಕಡೆಗೆ" ಎಂಬ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಇದರಿಂದ ಈ ಬಗ್ಗೆ ಜನರಲ್ಲಿ ಬದಲಾವಣೆಯ ಭಾವನೆಗಳು ಹೊರಹೊಮ್ಮಿರುತ್ತದೆ.

- **ಸಮಾಲೋಚನೆ:** ಕರ್ನಾಟಕ ರಾಜ್ಯ ಮಹಿಳಾ ಆಯೋಗದಲ್ಲಿ ಮಹಿಳೆಯರ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಾರದಲ್ಲಿ 2 ದಿನ ಮಹಿಳಾ ದೂರರ್ಜಿಗಳ ಬಗ್ಗೆ ವಿಚಾರಣೆ ನಡೆಸಲಾಗುತ್ತಿದ್ದು, ಇದರಿಂದ ದೂರರ್ಜಿದಾರರ ಸಮಸ್ಯೆಗಳನ್ನು ಪರಿಹರಿಸಲಾಗುತ್ತಿದೆ.